**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ 55 ಇಎಸ್‌ಟಿ (7) 2021

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001.
ದಿನಾಂಕ: 03-12-2021

**ಜ್ಞಾಪನ**

ವಿಷಯ: ದಿನಾಂಕ:13-12-2021 ರಿಂದ ಬೆಳಗಾವಿಯಲ್ಲಿ ಪ್ರಾರಂಭವಾಗಲಿರುವ ವಿಧಾನಸಭೆ ಮತ್ತು ವಿಧಾನಪರಿಷತ್ ಅಧಿವೇಶನಕ್ಕೆ ಸಿಬ್ಬಂದಿ ನಿಯೋಜನೆ ಬಗ್ಗೆ.

****..****

ಬೆಳಗಾವಿಯ ಸುವರ್ಣಸೌಧದಲ್ಲಿ ದಿನಾಂಕ: 13-12-2021 ರಿಂದ ನಡೆಯಲಿರುವ ಕರ್ನಾಟಕ ವಿಧಾನಸಭೆ ಮತ್ತು ವಿಧಾನಪರಿಷತ್‌ನ ಬೆಳಗಾವಿ ಅಧಿವೇಶನಕ್ಕೆ, ತಾಂತ್ರಿಕ ಶಿಕ್ಷಣ ಇಲಾಖೆಯ ವಿಷಯಗಳಿಗೆ ಸಂಬಂಧಪಟ್ಟಂತೆ ಸೂಕ್ತ ಮಾಹಿತಿ/ಉತ್ತರ ಒದಗಿಸುವ ಸಲುವಾಗಿ ಈ ಕೆಳಕಂಡ ಅಧಿಕಾರಿಗಳು/ಸಿಬ್ಬಂದಿಗಳನ್ನು ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ ಇಲ್ಲಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಅಧಿವೇಶನ ಮುಗಿಯುವವರೆಗೂ ನಿಯೋಜಿಸಲಾಗಿದೆ. ಕಾರ್ಯಕಲಾಪಗಳ ಕುರಿತು ಆಯುಕ್ತರಿಗೆ ಕಾಲ ಕಾಲಕ್ಕೆ ವರದಿ ನೀಡಲು ಸೂಚಿಸಲಾಗಿದೆ.

| ಕ್ರ. ಸಂ | ಹೆಸರು ಮತ್ತು ಪದನಾಮ | ಅಧಿವೇಶನದಲ್ಲಿ ನಿರ್ವಹಿಸಬೇಕಾದ ಕಾರ್ಯ |
|---|---|---|
| ಅ | ಶ್ರೀ ಜಿ. ಶ್ರೀಕಾಂತ್,<br>ಜಂಟಿ ನಿರ್ದೇಶಕರು(ತನಿಖೆ),<br>jdins.2014@gmail.com<br>ಮೊ: 9448820473 | ವಿಧಾನ ಸಭೆ ಮತ್ತು ವಿಧಾನ ಪರಿಷತ್ ಕಾರ್ಯಕಲಾಪಗಳಿಗೆ ಮಾಹಿತಿ ಒದಗಿಸುವ ಹಾಗೂ ಪ್ರಶ್ನೆಗಳಿಗೆ ಉತ್ತರಗಳನ್ನು ಸಕಾಲದಲ್ಲಿ ಕಳುಹಿಸುವ ಹಾಗೂ ಕಾಲಕಾಲಕ್ಕೆ ಆಯುಕ್ತರಿಗೆ ವರದಿ ನೀಡುವ ಸಂಪೂರ್ಣ ಉಸ್ತುವಾರಿ. |
| ಆ | ಶ್ರೀ ಯಮನಪ್ಪ ಎನ್. ದೊಡ್ಡಮನಿ,<br>ಸಹಾಯಕ ನಿರ್ದೇಶಕರು,<br>9448907601<br><br>ಶ್ರೀ ನಾಗೇಶಾಚಾರಿ, ಹಿರಿಯ ತಾಂತ್ರಿಕ ಸಹಾಯಕರು,<br>nageshachari.alur@gmail.com<br>ಮೊ:9901038692 | ವಿಧಾನ ಸಭೆ ಮತ್ತು ವಿಧಾನ ಪರಿಷತ್ ಕಾರ್ಯಕಲಾಪಗಳಿಗೆ ಪಾಲ್ಗೊಂಡು ಮಾಹಿತಿ ಒದಗಿಸುವ ಹಾಗೂ ಕಾಲಕಾಲಕ್ಕೆ ಮೇಲ್ಕಂಡ ಜಂಟಿ ನಿರ್ದೇಶಕರಿಗೆ ವರದಿ ನೀಡುವ ಸಂಪೂರ್ಣ ಉಸ್ತುವಾರಿ. |
| ಇ | ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ | ವಿಧಾನಸಭೆ ಕಾರ್ಯಕಲಾಪಗಳಿಗೆ ಪಾಲ್ಗೊಂಡು ಮಾಹಿತಿ ಒದಗಿಸುವ ಹಾಗೂ ಕಾಲಕಾಲಕ್ಕೆ ಮೇಲ್ಕಂಡ ಜಂಟಿ ನಿರ್ದೇಶಕರಿಗೆ ವರದಿ ನೀಡುವ ಹಾಗೂ ಇ-ಮೇಲ್ ಮೂಲಕ ಪ್ರಶ್ನಾವಳಿಗಳನ್ನು ಸ್ವೀಕರಿಸುವ ಹಾಗೂ ರವಾನಿಸುವ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಸಂಪೂರ್ಣ ಉಸ್ತುವಾರಿ.<br><br>**ಸದರಿ ಕಾರ್ಯಕ್ಕೆ ಸಂಸ್ಥೆಯಿಂದ ಸಿಬ್ಬಂದಿಗಳನ್ನು ನಿಯೋಜಿಸುವುದು.** |

| | | |
|---|---|---|
| | ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ | ವಿಧಾನಸಭೆ ಕಾರ್ಯಕಲಾಪಗಳಿಗೆ ಪಾಲ್ಗೊಂಡು ಮಾಹಿತಿ ಒದಗಿಸುವ ಹಾಗೂ ಕಾಲಕಾಲಕ್ಕೆ ಮೇಲ್ಕಂಡ ಜಂಟಿ ನಿರ್ದೇಶಕರಿಗೆ ವರದಿ ನೀಡುವ ಹಾಗೂ ಇ-ಮೇಲ್ ಮೂಲಕ ಪ್ರಶ್ನಾವಳಿಗಳನ್ನು ಸ್ವೀಕರಿಸುವ ಹಾಗೂ ರವಾನಿಸುವ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಸಂಪೂರ್ಣ ಉಸ್ತುವಾರಿ. **ಸದರಿ ಕಾರ್ಯಕ್ಕೆ ಸಂಸ್ಥೆಯಿಂದ ಸಿಬ್ಬಂದಿಗಳನ್ನು ನಿಯೋಜಿಸುವುದು**. |
| ಈ | ಶ್ರೀ ಕೃಷ್ಣಮೂರ್ತಿ<br>ಅಧೀಕ್ಷಕರು<br>ಮೊ:9480219244<br><br>ಶ್ರೀ ದಿಲೀಪ್.ಎಸ್.ಎನ್<br>ದ್ವಿ.ದ.ಸ<br>ಮೊ:8867685747 | ಪ್ರತಿ ನಿತ್ಯ ಬೆಳಿಗ್ಗೆ ಮತ್ತು ಸಾಯಂಕಾಲ ಬೆಂಗಳೂರಿನ ವಿಧಾನ ಮಂಡಲದ ಸಚಿವಾಲಯದ ಮತ್ತು ಶಿಕ್ಷಣ ಸಚಿವಾಲಯದಿಂದ ಪ್ರತಿ ದಿನ ಮತ್ತು ಮರುದಿನ ವಿಧಾನಸಭೆ ಅಧಿವೇಶನಗಳಿಗೆ ನಿಗದಿಪಡಿಸಿರುವ ವ್ಯವಹಾರಗಳ ಮತ್ತು ಇತರ ವಿಷಯಗಳ ಪಟ್ಟಿಯನ್ನು ಪಡೆದು ಆಯುಕ್ತರು ಮತ್ತು ಮೇಲ್ಕಂಡ ಅಧಿಕಾರಿ ವರ್ಗದವರ ಗಮನಕ್ಕೆ ತರುವುದು. |

ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗಗಳ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರು (ಗ್ರೂಪ್-ಡಿ ನೌಕರರು ಸೇರಿದಂತೆ) ಅಧಿವೇಶನ ನಡೆಯುವಷ್ಟು ಕಾಲ ಯಾವುದೇ ರೀತಿಯ ರಜೆ ಹಾಕಬಾರದು ಹಾಗೂ ಕಛೇರಿ ವೇಳೆಯಲ್ಲಿ ಮತ್ತು ಕಛೇರಿ ವೇಳೆಯ ನಂತರವೂ ಅವಶ್ಯವಿದ್ದಲ್ಲಿ, ಸಂಬಂಧಪಟ್ಟ ವಿಭಾಗಗಳಲ್ಲಿ ಹಾಜರಿದ್ದು ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಪ್ರಶ್ನೆಗಳಿಗೆ/ಗಮನ ಸೆಳೆಯುವ ಸೂಚನೆಗಳಿಗೆ ಉತ್ತರಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಪೂರಕ ಟಿಪ್ಪಣಿಯೊಂದಿಗೆ ತಯಾರಿಸಿ ಕೊಡತಕ್ಕದ್ದು ಹಾಗೂ ಸರ್ಕಾರಕ್ಕೆ ತಲುಪಿಸತಕ್ಕದ್ದು. ಸಂಪೂರ್ಣ ಶ್ರದ್ಧೆ ಮತ್ತು ಜವಾಬ್ದಾರಿಯಿಂದ ಅಧಿವೇಶನದ ಕರ್ತವ್ಯವನ್ನು ನಿರ್ವಹಿಸಲು ಕಟ್ಟುನಿಟ್ಟಾಗಿ ಸೂಚಿಸಿದೆ.

**ಟಿಪ್ಪಣಿ ಮಾನ್ಯ ಆಯುಕ್ತರಿಂದ.**
**ಅನುಮೋದಿಸಿದೆ**

ತಮ್ಮ ವಿಶ್ವಾಸಿ,

**ಜಂಟಿ ನಿರ್ದೇಶಕರು (ಆಡಳಿತ)**
ತಾಂತ್ರಿಕ ಶಿಕ್ಷಣ ಇಲಾಖೆ

**ಇವರಿಗೆ,**

ಮೇಲ್ಕಂಡ ಅಧಿಕಾರಿಗಳು/ಸಿಬ್ಬಂದಿಯವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ .

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-1
2. ಸರ್ಕಾರದ ಕಾರ್ಯದರ್ಶಿ, ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು-1
3. ಸರ್ಕಾರದ ಕಾರ್ಯದರ್ಶಿ, ವಿಧಾನ ಪರಿಷತ್ ಸಚಿವಾಲಯ, ವಿಧಾನಸೌಧ, ಬೆಂಗಳೂರು-1
4. ಸರ್ಕಾರದ ಜಂಟಿ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು-1
5. ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು-1

6. ತಾಂತ್ರಿಕ ಶಿಕ್ಷಣ ಆಯುಕ್ತಾಲದ ಜಂಟಿ ನಿರ್ದೇಶಕರು, ಆಡಳಿತ/ಪರೀಕ್ಷೆ/ಎಟಿಎಸ್/ಸಿಡಿಸಿ ಇವರ ಮಾಹಿತಿಗಾಗಿ
7. ಆಯುಕ್ತರ ಆಪ್ತಶಾಖೆ,
8. ನಿರ್ದೇಶಕರ ಆಪ್ತಶಾಖೆ
9. ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗಗಳ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಹಾಗೂ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜು / ಪಾಲಿಟೆಕ್ನಿಕ್‌ಗಳು / ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಎಲ್ಲಾ ಅಧಿಕಾರಿಗಳು / ಸಿಬ್ಬಂದಿಯವರು ಅಧಿವೇಶನ ನಡೆಯುವಷ್ಟು ಕಾಲ ಯಾವುದೇ ರೀತಿಯ ರಜೆ ಹಾಕಬಾರದು ಹಾಗೂ ಕಛೇರಿ ವೇಳೆಯಲ್ಲಿ ಮತ್ತು ಕಛೇರಿ ವೇಳೆಯ ನಂತರವೂ ಸಂಬಂಧಪಟ್ಟ ವಿಭಾಗಗಳಲ್ಲಿ ಹಾಜರಿದ್ದು, ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಪ್ರಶ್ನೆಗಳಿಗೆ/ಗಮನ ಸೆಳೆಯುವ ಸೂಚನೆಗಳಿಗೆ ಪೂರಕ ಮಾಹಿತಿಯನ್ನು ತ್ವರಿತವಾಗಿ ಒದಗಿಸತಕ್ಕದ್ದು - **ಇಲಾಖಾ ವೆಬ್‌ಸೈಟ್ ಮೂಲಕ**
10. ಆಯುಕ್ತಾಲಯದ ಎಲ್ಲಾ ವಾಹನ ಚಾಲಕರು ವಿಧಾನಸಭೆಯ ಕಲಾಪಗಳು ಮುಗಿಯವವರೆಗೆ ಅಧಿವೇಶನದ ಕೆಲಸಕ್ಕೆ ಹಾಜರಾಗುವ ಹಿರಿಯ ಅಧಿಕಾರಿಗಳಿಗಾಗಿ ವಾಹನ ಉಪಯೋಗಿಸುವಂತೆ ಸೂಚಿಸಲಾಗಿದೆ.
11. ಲೆಕ್ಕಾಧಿಕಾರಿಗಳ ಗಮನಕ್ಕೆ ಪರಿವೀಕ್ಷಣೆಗೆ ಹೋಗುವ ಸಿಬ್ಬಂದಿಗಳು ಅಧಿವೇಶನ ಮುಗಿಯುವರೆಗೆ ಹೋಗತಕ್ಕದ್ದಲ್ಲ ಎಂದು ಕಟ್ಟುನಿಟ್ಟಾಗಿ ತಿಳಿಸಲಾಗಿದೆ.
12. ಇ-ಆಡಳಿತ ವಿಭಾಗಕ್ಕೆ ಸೂಕ್ತ ಕ್ರಮಕ್ಕಾಗಿ